ಫಾರಂ ನಂ.4 (ಕ್ರಿಮಿನಲ್)
ಡಿಪೋಶಿಷನ್ ಶೀಟ್ಸ್

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ

**ಸಿ.ಸಿ.ನಂ.*249/2018***

ಸಾಕ್ಷಿಯ ಹೆಸರು ಃ ಲೋಕೇಶ ಸಿಡಬ್ಲ್ಯೂ *-02*

ತಂದೆಯ ಹೆಸರು ಃ ಸಿದ್ದಪ್ಪ ಪಿಡಬ್ಲ್ಯೂ *-02*

ವಯಸ್ಸು ಃ *50* ವರ್ಷ

ಉದ್ಯೋಗ ಃ ವ್ಯವಸಾಯ

ವಾಸ ಸ್ಥಳ ಃ ತರೀಕೆರೆ

ದಿನಾಂಕಃ *23-03-2021* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದ ಃ**

ಚಾಸಾ *1* ರವರ ಪರಿಚಯವಿದೆ. ಅವರ ಗಂಡ ರಘುರವರ ಪರಿಚಯವಿದೆ. ಆರೋಪಿ ರವಿರವರ ಪರಿಚಯವಿದೆ. ಉಳಿದ ಆರೋಪಿತರ ಪರಿಚಯವಿದೆ. ಅವರು ನಮ್ಮ ಊರಿನವರಾಗಿದ್ದಾರೆ.

ಚಾಸಾ *1* ರವರಿಗೆ *2012* ರಲ್ಲಿ ಮದುವೆಯಾಗಿದೆ. ಮದುವೆಯಾದ ನಂತರ ಆಕೆ ಅವರ ಗಂಡನ ಮನೆಯಲ್ಲಿದ್ದರು. ಆಕೆಯ ಗಂಡ ರಘುರವರು ದಿನಸಿ ಅಂಗಡಿಯನ್ನು ನಡೆಸುತ್ತಿದ್ದರು. ಸದರಿ ಅಂಗಡಿಯನ್ನು ಡಿ ಸಿ ಸಿ ಬ್ಯಾಂಕಿನ *5*ನೇ ನಂಬರಿನ ಮಳಿಗೆಯಲ್ಲಿ ಇಟ್ಟುಕೊಂಡಿದ್ದರು. *1*ನೇ ಆರೋಪಿ ಅಲ್ಲೇ ಬೀಡಾ ಅಂಗಡಿ ಇಟ್ಟುಕೊಂಡಿದ್ದರು. ಚಾಸಾ *1* ಮತ್ತು ಆಕೆಯ ಗಂಡ ಬೇರೆ ಮನೆ ಮಾಡಿಕೊಂಡು ತರೀಕೆರೆಯಲ್ಲಿ ವಾಸವಿದ್ದರು. ಅವರು ಬೇರೆ ವಾಸವಿದ್ದರೂ ಸಹೋದರರ ಜೊತೆ ಒಂದೇ ವ್ಯವಹಾರ ಮಾಡಿಕೊಂಡು ಹೋಗುತ್ತಿದ್ದರು. ನಂತರ ಚಾಸಾ *1* ರವರು ಗರ್ಭಿಣಿಯಾಗಿದ್ದರಿಂದ ಅವರ ತವರು ಮನೆ ಅಂದರೆ ಚಿಕ್ಕಮಗಳೂರಿಗೆ ಹೋಗಿದ್ದರು.

ಮೃತ ರಘುರವರ ಹೆಸರಿನಲ್ಲಿ ಒಂದು ನಿವೇಶನ ತರೀಕೆರೆಯ ಬಿಳಿಮೊಗ್ಗದ ಬೀದಿಯಲ್ಲಿ ಇರುತ್ತದೆ. ಅದನ್ನು ಆರೋಪಿತರು ಮಾರಾಟ ಮಾಡಿಸಿ, ಹಣವನ್ನು ರಘುರವರಿಗೆ ಕೊಟ್ಟಿರುವುದಿಲ್ಲ. ನಂತರ *2014* ರಲ್ಲಿ ರಘುರವರು ಅಪಘಾತಕ್ಕೊಳಪಟ್ಟು ತೀರಿಕೊಂಡಿರುತ್ತಾರೆ. ಆದರೆ ಆರೋಪಿತರು ಅವರು ತೀರಿಕೊಂಡ ವಿಚಾರವನ್ನು ಚಾಸಾ *1* ರವರಿಗೆ ತಿಳಿಸಿರುವುದಿಲ್ಲ. ಆದರೆ ನಿಧಾನವಾಗಿ ಅವರಿಗೆ ಗೊತ್ತಾಗಿ ಬಂದಿರುತ್ತಾರೆ. ಚಾಸಾ *1* ರವರ ಮೇಲೆ ಗಲಾಟೆ ಮಾಡಿರುತ್ತಾರೆ. ರಘುರವರ ಹೆಸರಿನಲ್ಲಿ *3* ಎಕರೆ ಜಮೀನು ಕೂಡಾ ಇತ್ತು. ಸದರಿ ಜಮೀನು

ಸಹೋದರರ ನಡುವೆ ಆದ ವಿಭಾಗದಲ್ಲಿ ರಘುರವರಿಗೆ ಬಂದಿರುತ್ತದೆ. ರಘುರವರು ತೀರಿಕೊಂಡ ನಂತರ ಚಾಸಾ *1* ರವರ ಹೆಸರಿಗೆ ಅದರ ಖಾತೆ ಬದಲಾಗಿರುತ್ತದೆ. ರಘುರವರು ಬದುಕಿರುವಾಗ ಕಾವೇರಿ ಬ್ಯಾಂಕಿನಲ್ಲಿ ವ್ಯವಹಾರ ಮಾಡುತ್ತಿದ್ದರು. ಅವರು ಸದರಿ ಬ್ಯಾಂಕಿನ ಚೆಕ್ಕುಗಳನ್ನು ಅವರ ಅಂಗಡಿಯಲ್ಲಿ ಇಟ್ಟುಕೊಂಡಿದ್ದರು. ಚಾಸಾ *1* ರವರ ಹೆಸರಿಗೆ ಖಾತೆ ಆಗುವುದನ್ನು *1* ರಿಂದ *3*ನೇ ಆರೋಪಿತರು ತಕರಾರು ಮಾಡಿರುತ್ತಾರೆ. ನಂತರ ರಘುರವರ ಸಹೋದರಿ ಪ್ರಕರಣ ದಾಖಲು ಮಾಡಿ, ಭಾಗ ಕೇಳಿರುತ್ತಾರೆ. ಸದರಿ ರಘುರವರ ಹೆಸರಿನಲ್ಲಿದ್ದ *3* ಎಕರೆ ಜಮೀನಿನಲ್ಲಿ ಅಡಿಕೆ ಬೆಳೆ ಇರುತ್ತದೆ. ರಘುರವರು ಗಂಗಾಧರಪ್ಪರವರಿಗೆ ಅಡಿಕೆ ಚೇಣಿ ಬಗ್ಗೆ ಯಾವುದಾದಾರೂ ದಾಖಲೆ ಬರೆದಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಠಾಣೆಯಲ್ಲಿ ಗೊತ್ತಾಗಿರುತ್ತದೆ. ಸದರಿ ಅಡಿಕೆ ಬೆಳೆಯಿಂದ *3* ವರ್ಷಗಳಿಗೆ *10* ಲಕ್ಷ ರೂ. ಬರುತ್ತಿರಲಿಲ್ಲ. *4* ಮತ್ತು *5*ನೇ ಆರೋಪಿತರಿಗೆ ರಘುರವರು ಚೆಕ್ಕು ಕೊಟ್ಟಿದ್ದಾರೆಂದು ಗೊತ್ತಾಗಿದೆ. ಸದರಿ ಚೆಕ್ಕಿನಲ್ಲಿ ಹಾಕಿದ್ದ ಸಹಿ ರಘುರವರದ್ದು ಆಗಿರುವುದಿಲ್ಲ. ಅದನ್ನು ಯಾರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಚೇಣಿ ಒಪ್ಪಂದ ಪತ್ರದಲ್ಲಿ ಕಾಣಿಸುವ ಸಹಿ ಕೂಡಾ ರಘುರವರದ್ದು ಆಗಿರುವುದಿಲ್ಲ. ಅದನ್ನು ಕೂಡಾ ಯಾರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಆರೋಪಿತರೆಲ್ಲರೂ ಸೇರಿ ಪಿತೂರಿ ಮಾಡಿರುವ ಬಗ್ಗೆ ಅನಂತರ ನನಗೆ ಗೊತ್ತಾಗಿದೆ.

ಸಾಕ್ಷಿಗೆ ನಿಪಿ *2* ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ *2(ಬಿ)* ಎಂದು ಗುರುತಿಸಲಾಯಿತು. ಅದನ್ನು ಡಿ ಸಿ ಬ್ಯಾಂಕಿನ ಬಳಿ ಮಾಡಿದ್ದೇನೆ. ಅಲ್ಲಿಗೆ ಪೊಲೀಸರು ಬಂದಿದ್ದರು. ಅದೇ ಮಳಿಗೆಯಲ್ಲಿ ರಘುರವರು ವ್ಯಾಪಾರ ಮಾಡುತ್ತಿದ್ದರು. ನಿಪಿ *3* ರಲ್ಲಿ ಮೃತ ರಘುವಿನ ಭಾವಚಿತ್ರ ಇರುತ್ತದೆ. ನಿಪಿ *3* ರಲ್ಲಿ ರಘುರವರ ಸಹಿಗಳು ಇರುತ್ತದೆ. ನಿಪಿ *5* ರಲ್ಲಿರುವ ಸಹಿಗಳು ಮೃತ ರಘುರವರ ಸಹಿಗಳಾಗಿರುವುದಿಲ್ಲ. *4* ಮತ್ತು *5*ನೇ ಆರೋಪಿತರು ಚೆಕ್ಕುಗಳನ್ನು ಬ್ಯಾಂಕಿಗೆ ಸಲ್ಲಿಸಿ, ಕಲಂ. *138* ಎನ್ ಐ ಆಕ್ಟ್ ನಡಿಯಲ್ಲಿ ರಘುರವರ ಮೇಲೆ ಪ್ರಕರಣ ದಾಖಲು ಮಾಡಿರುತ್ತಾರೆ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರವರಿಂದಃ-**

ನಾನು ಪಿ ಯು ಸಿ ಓದಿದ್ದೇನೆ. ನನ್ನ ಸ್ವಂತ ಊರು ಹೊಸದುರ್ಗ ತಾಲ್ಲೂಕಿನ ಬೆಲಗೂರು. ನಾನು ನನ್ನ ಹೆಣ್ಣು ಕೊಟ್ಟ ಮಾವನ ಮನೆಯಲ್ಲಿ ಸೆಟ್ಲ್ ಆಗಿದ್ದೇನೆ. ನಾನು *2002-03* ರಿಂದ ತರೀಕೆರೆಯಲ್ಲಿ ವಾಸವಿದ್ದೇನೆ. ನನ್ನ ಮಾವನ ಭಾಗಕ್ಕೆ ಬಂದಿರುವ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ನನ್ನ ಹೆಸರಿನಲ್ಲಿ ಸ್ವಂತ ಜಮೀನು ಅಥವಾ ಮನೆ ಇರುವುದಿಲ್ಲ. *2014-15* ರ ಸಮಯದಲ್ಲಿ ನಾನು ವಿನಾಯಕ ನಗರದಲ್ಲಿ ವಾಸವಿದ್ದೆ. ನಾನು ಕುರುಬ ಜನಾಂಗದವನು. *1*ನೇ ಆರೋಪಿ ಬಿಳಿಮಗ್ಗದವರು. ತುಳಸಮ್ಮನ ಗಂಡ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ.

ತುಳಸಮ್ಮನ ಕುಟುಂಬದಲ್ಲಿ ಎಷ್ಟು ಜನ ಅಣ್ಣ-ತಮ್ಮಂದಿರು ಗೊತ್ತಿಲ್ಲ. ಬಿಳಿಮಗ್ಗದ ಬೀದಿಯಲ್ಲಿ ಅವರ ಮನೆ ನಾನು ನೋಡಿದ್ದೇನೆ. ಅವರ ಅಕ್ಕ-ಪಕ್ಕ ಯಾರು ಇದ್ದಾರೆಂದು ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಚಕ್ಕುಬಂದಿ ಬೇಕು ಎಂದರೆ ಕೊಡುತ್ತೇನೆಂದು ಹೇಳುತ್ತಾರೆ. ಅವರ ಮನೆಯ ಅಸೆಸ್ಮೆಂಟ್ ನಂಬರು ಗೊತ್ತಿಲ್ಲ. ಬಿಳಿಮಗ್ಗದ ಬೀದಿಯಲ್ಲಿ ತುಳಸಮ್ಮನ ಸಂಬಂದಿಕರು ವಾಸವಿರುತ್ತಾರೆ. ತುಳಸಮ್ಮನ ಅಕ್ಕನ ಮಗ ಡಿ ಸಿ ಸಿ ಬ್ಯಾಂಕ್ ಮಳಿಗೆಯಲ್ಲಿ ಒಂದು ಬೀಡಾ ಅಂಗಡಿ ಇಟ್ಟುಕೊಂಡಿದ್ದಾರೆ.

*2012* ರಲ್ಲಿ ಚಾಸಾ *1* ರವರಿಗೆ ಮದುವೆಯಾಗಿದೆ. ನಾನು ಮದುವೆಗೆ ಹೋಗಿಲ್ಲ. ಅವರಿಗೆ ಮಕ್ಕಳು ಆಗಲಿಲ್ಲ ಸಾಕ್ಷಿ ಮುಂದುವರಿದು ಅವರಿಗೆ ಗರ್ಭಪಾತವಾಗಿದೆ ಎಂದು ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ರಘುರವರಿಗೆ ನನಗೆ ಅಷ್ಟೊಂದು ವಿಶ್ವಾಸ ಇಲ್ಲ ಆದರೆ ಅಂಗಡಿ ಹೋಗಿ ಬರುತ್ತಿದ್ದೆನು. ರಘುರವರ ಅಣ್ಣನ ಬಳಿ ಕೂಡಾ ನನಗೆ ಅಷ್ಟೊಂದು ವಿಶ್ವಾಸ ಇರಲಿಲ್ಲ. ಅವರು ಎಲ್ಲೆಲ್ಲಿ ಸಾಲ ಮಾಡಿದ್ದಾರೆಂದು ಗೊತ್ತಿಲ್ಲ. ಸಾಕ್ಷಿ ಠಾಣೆಯಲ್ಲಿ ಆ ವಿಚಾರ ಗೊತ್ತಾಗಿದೆ ಎಂದು ಹೇಳುತ್ತಾರೆ. ಠಾಣೆಯಲ್ಲಿ ಮಾತ್ರ ಆ ವಿಚಾರ ಗೊತ್ತಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವಲ್ಪ ಸ್ವಲ್ಪ ವಿಷಯ ಮೊದಲೇ ಗೊತ್ತಿತ್ತು ಎಂದು ಹೇಳುತ್ತಾರೆ. ಠಾಣೆಯಲ್ಲಿ ಚಾಸಾ *1* ರವರು ಈ ವಿಚಾರವನ್ನು ನನಗೆ ಹೇಳಿದ್ದಾರೆ. ರಘು ಮತ್ತು ಅವರ ಸಹೋದರ ಮತ್ತು ಅವರ ತಾಯಿ ನಡುವೆ ಆದ ವಿಭಾಗವನ್ನು ನಾನು ನೋಡಿಲ್ಲ. ವಿಭಾಗ ಪತ್ರ ನೋಡಿದ್ದೇನೆಂದು ಹೇಳುತ್ತಾರೆ. ನಾನು ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣದಲ್ಲಿ ಸಾಕ್ಷ್ಯ ಕೊಟ್ಟಿಲ್ಲ. ಸಿವಿಲ್ ಪ್ರಕರಣ ಏನಾಯ್ತು ಎಂದು ಗೊತ್ತಿಲ್ಲ. ರಘುರವರು ಎಷ್ಟನೇ ಇಸವಿಯಲ್ಲಿ ಮಳಿಗೆ ಬಾಡಿಗೆಗೆ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ರವಿಗೂ ಕೂಡಾ ಮಳಿಗೆ ಬಾಡಿಗೆಗೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಪಕ್ಕದಲ್ಲಿ ಬೀಡಾ ಅಂಗಡಿ ಇಟ್ಟುಕೊಂಡಿದ್ದರು ಎಂದು ಹೇಳುತ್ತಾರೆ. ರವಿ ಮುನ್ಸಿಪಾಲಿಸಿಟಿಗೆ ಕಂದಾಯ ಕಟ್ಟುವುದನ್ನು ನಾನು ನೋಡಿಲ್ಲ. ರಘುರವರ ಸಹಿಯನ್ನು ನಾನು ನೋಡಿದ್ದೇನೆ. ಈಗ ನನಗೆ ತೋರಿಸುತ್ತಿರುವ ಸಹಿ ರಘುರವರದ್ದಾಗಿರುವುದಿಲ್ಲ. ಈಗ ನನಗೆ ತೋರಿಸುತ್ತಿರುವ ವಿಭಾಗ ಪತ್ರದಲ್ಲಿ ಕಾಣಿಸುವ ಸಹಿ ಕಟಾಚಾರಕ್ಕೆ ಮಾಡಿದಂತಿದೆ.

ಗೋಪಾಲಕೃಷ್ಣರವರ ತಂದೆ ಹೆಸರು ಹರಳಪ್ಪ ಎಂದರೆ ಸರಿ. ಅವರು ಕುರುಬ ಸಮಾಜದ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಅವರ ಕುಟುಂಬಕ್ಕೆ ಸಾಕಷ್ಟು ಜಮೀನು ಇದೆ ಎಂದರೆ ಸರಿ. ಅವರಿಗೆ *24* ಎಕರೆ ತೋಟ ಇದೆ ಎಂದರೆ ಸರಿ. ಅವರು ಲೇವಾದೇವಿಗೆ ಹಣ ಕೊಡುತ್ತಾರೆಂದರೆ ಸರಿ. ಆ ರೀತಿ ರೈತರಿಗೆ, ವ್ಯಾಪಾರಸ್ಥರಿಗೆ ಕೊಡುತ್ತಾರೆಂದರೆ ಸರಿ. ಅವರು ಸುಮಾರು ಕುಟುಂಬಗಳಿಗೆ ಹಣದ ಸಹಾಯ ವ್ಯವಹಾರದ ಮೂಲಕ ಮಾಡಿದ್ದಾರೆಂದರೆ ಇರಬಹುದು. ಅವರ ಬಗ್ಗೆ ನಗರದಲ್ಲಿ ಒಳ್ಳೆ ಅಭಿಪ್ರಾಯ ಇದೆ ಎಂದರೆ ಸರಿ. *4*ನೇ ಆರೋಪಿಯು ಕೂಡಾ

ಗೌರವಸ್ಥರಾಗಿದ್ದಾರೆಂದರೆ ಸರಿ. ಅವರ ಮೇಲೆ ಬೇರೆ ಪ್ರಕರಣ ಇಲ್ಲವೆಂದರೆ ಸರಿ. 5ನೇ ಆರೋಪಿ ಗಂಗಾಧರ ರವರು ಕೂಡಾ ಅಡಿಕೆ ಚೇಣಿ ಮಾಡುತ್ತಾರೆಂದರೆ ಸರಿ. ಹಣ ಕೊಟ್ಟಾಗ ಭದ್ರತೆಗಾಗಿ ದಾಖಲೆ ಬರೆದುಕೊಡುತ್ತಾರೆಂದರೆ ಸರಿ. 5ನೇ ಆರೋಪಿಯ ಪತ್ನಿ ಪುರಸಭೆಯ ಅಧ್ಯಕ್ಷರಾಗಿದ್ದರು ಎಂದರೆ ಸರಿ. 5ನೇ ಆರೋಪಿ ಕೂಡಾ ಪುರಸಭೆಯ ಕೌನ್ಸಿಲರ್ ಆಗಿದ್ದರು ಎಂರದೆ ಸರಿ. 5ನೇ ಆರೋಪಿ ಮೇಲೆ ಯಾವುದೇ ಅಪರಾಧಿಕ ಪ್ರಕರಣ ಇರುವುದಿಲ್ಲವೆಂದರೆ ಸರಿ.

ಮೃತ ರಘುರವರು ಸಾಲ ಮಾಡಿದ್ದರು ಎಂದರೆ ಸಾಕ್ಷಿದಾರರು ಮಾಡಿದ್ದರು, ಅದನ್ನು ಅವರ ಮಾವ ಬಂದು ಬಗೆಹರಿಸಿದ್ದರು ಎಂದು ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಚಾಸಾ 1 ರವರು ಆ ಕಾರಣ ರಘುರವರನ್ನು ಬಿಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ರಘುರವರು ಎಸ್ ಬಿ ಎಂ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ರವಿ ಮತ್ತು ರಘುರವರು ಜಂಟಿ ಖಾತೆ ಸಾಲ ಮಾಡಿದ್ದರು ಎಂದರೆ ಗೊತ್ತಿಲ್ಲ. ರಘು ಮತ್ತು ರವಿ ರವರು ನಿವೇಶನ ಮಾರಿದ್ದರು ಎಂದು ಗೊತ್ತಾಗಿದೆ ಆದರೆ ಯಾವ ವರ್ಷ, ಯಾರಿಗೆ ಮಾರಾಟ ಮಾಡಿದ್ದರು ಎಂದು ಗೊತ್ತಿಲ್ಲ. ಮನೆಗೆ ರೇಷನ್ ಬೇಕಾದಾಗ ಅವರ ಅಂಗಡಿಗೆ ಹೋಗುತ್ತಿದ್ದೆ. ಲೈಸನ್ಸ್ ಯಾರ ಹೆಸರಿನಲ್ಲಿತ್ತು ಗೊತ್ತಿಲ್ಲ. ನಾನು ನೋಡಿಲ್ಲ. ಚೆಕ್ಕು ಪುಸ್ತಕವನ್ನು ತೆಗೆದು ಸಹಿ ಮಾಡಿ ಕೊಟ್ಟಿದ್ದನ್ನು ಕೆಲವೊಮ್ಮೆ ನಾನು ನೋಡಿದ್ದೇನೆ. ಯಾರಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿದಾರರು ವ್ಯವಹಾರಸ್ಥರಿಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಸದರಿ ಚೆಕ್ಕು ಕಾವೇರಿ ಬ್ಯಾಂಕಿಗೆ ಸೇರಿದ್ದಾಗಿರುತ್ತದೆ. ಆ ರೀತಿ ಬರೆದುಕೊಟ್ಟ 5-6 ತಿಂಗಳ ನಂತರ ರಘು ತೀರಿಕೊಂಡಿದ್ದಾರೆ. ರಘುರವರಿಗೆ ಪೊಲೀಸ್ ಠಾಣೆ ಎದುರಿಗೆ ಅಪಘಾತವಾಗಿತ್ತು ಎಂದರೆ ಸರಿ. ಅವರ ಅಪಘಾತದ ಪರಿಹಾರದ ಬಗ್ಗೆ ಚಾಸಾ 1 ಮತ್ತು ಮೃತರ ತಾಯಿ ಅರ್ಜಿ ಹಾಕಿದ್ದರು ಎಂದರೆ ಸರಿ. ಇಬ್ಬರಿಗೂ ಸಮನಾಗಿ ಪರಿಹಾರ ಕೊಡಲು ಆದೇಶವಾಗಿರುತ್ತದೆ ಎಂದರೆ ಸರಿ. ಅಡಿಕೆ ಸಸಿಯನ್ನು ಯಾವ ವರ್ಷದಲ್ಲಿ ಹಾಕಿದ್ದರು ಎಂದು ಗೊತ್ತಿಲ್ಲ. ನಾನು ನೋಡಿದಾಗ 4-5 ವರ್ಷದ ಗಿಡಗಳಾಗಿದ್ದವು. ನಾನು ಅವುಗಳನ್ನು 2015 ರಲ್ಲಿ ನೋಡಿದ್ದೇನೆ. ಅಲ್ಲಿ 2 ಬೋರ್ ಗಳು ಇದ್ದವು. ಅಣ್ಣತಮ್ಮಂದಿರು ಅದನ್ನು ಸಾಲ ಮಾಡಿ ಖರೀದಿ ಮಾಡಿದ್ದರು. ರವಿರವರು ತಮ್ಮ ಅಡಿಕೆ ತೋಟಕ್ಕೆ ಬರಗಾಲ ಇದ್ದರಿಂದ ನೀರು ಒಡೆಸಿಕೊಂಡರು ಎಂದರೆ ಸರಿ. ರಘು 4-5 ತರಹ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಅಡಿಕೆ ಚೇಣಿ ಕೊಡುವಾಗ ಚಾಸಾ 1 ರವರ ಗಂಡ ನನ್ನನ್ನು ಕರೆದುಕೊಂಡು ಹೋಗಿಲ್ಲ. 4ನೇ ಆರೋಪಿ ಬಳಿ ಎಷ್ಟು ಹಣ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಚೇಣಿ ದಾಖಲೆಗಳನ್ನು ಠಾಣೆಯಲ್ಲಿ ಮೊದಲು ನೋಡಿದ್ದೇನೆ. ಅದರ ಮೊದಲು ಆ ದಾಖಲೆಗಳನ್ನು ನೋಡಿಲ್ಲವೆಂದರೆ ಸರಿ. ಮಹಜರಿನ ಬಗ್ಗೆ ನನಗೆ ನೋಟೀಸು ಕೊಟ್ಟಿಲ್ಲ. ಮುಳ್ಳಪ್ಪ ಅಂದರೆ

ಚಾಸಾ *1* ರವರ ತಂದೆ ನನಗೆ ಅಷ್ಟೊಂದು ಪರಿಚಯವಿಲ್ಲ. ಈಗ ಚಾಸಾ *1* ರವರು ನಮ್ಮ ಮನೆ ಹಿಂಭಾಗದಲ್ಲಿ ಮನೆ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಅವರು ಇತ್ತೀಚೆಗೆ ಮದುವೆ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆಯಲಾಗಿದೆ ಎಂದು ನಿಮಗೆ ಗೊತ್ತಿಲ್ಲವೆಂದರೆ ಸಾಕ್ಷಿದಾರರು ಅದನ್ನು ಓದಿ ಹೇಳಿದ್ದಾರೆ ಎಂದು ಹೇಳುತ್ತಾರೆ. ಮಹಜರಿನಲ್ಲಿ ಏನೆಲ್ಲಾ ವಸ್ತುಗಳನ್ನು ಬರೆದಿದ್ದಾರೋ ಅವುಗಳನ್ನು ತೆಗೆದುಕೊಂಡಿದ್ದಾರೆ. ಸಾಕ್ಷಿ ಅದನ್ನು ಓದಿ ಸಹಿ ಮಾಡಿದ್ದೇನೆಂದು ಹೇಳುತ್ತಾರೆ. *2015* ರ *6*ನೇ ತಿಂಗಳಲ್ಲಿ ಪೊಲೀಸರು ನನ್ನನ್ನು ಕರೆಸಿದ್ದರು. ಚೇಣಿಗೆ ಹಣ ಕೊಡುವವರು ತೋಟಕ್ಕೆ ಬಂದು ಬೇಟಿ ಕೊಡುತ್ತಾರೆಂದರೆ ಸರಿ. ಪಹಣಿ ಅವರ ಹೆಸರಿನಲ್ಲಿ ಇದ್ದರೇ ಚೇಣಿ ಚೀಟಿ ಬರೆದುಕೊಡುತ್ತಾರೆಂದರೆ ಸರಿ. ಸಾಕ್ಷಿ ಮುಂದುವರಿದು ಅಷ್ಟು ಮೊತ್ತದ ಅಡಿಕೆ ಇದ್ದರೇ ಹಣ ಕೊಡುತ್ತಾರೆಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು *10* ಲಕ್ಷದ ಮೌಲ್ಯದ ಅಡಿಕೆ ಈ ಪ್ರಕರಣದಲ್ಲಿ ಇರಲಿಲ್ಲ ಎನ್ನುತ್ತಾರೆ. ನಾನು ಸದರಿ ಜಮೀನಿಗೆ ಬೇಟಿ ಕೊಟ್ಟಿದ್ದೇನೆ. ನಾನು ಬೇಟಿ ಕೊಡುವ ಎಷ್ಟು ವರ್ಷದ ಮೊದಲು ಚೇಣಿ ಚೀಟಿ ಆಗಿತ್ತು ಎಂದು ಗೊತ್ತಿಲ್ಲ ಸಾಕ್ಷಿ ಅಲ್ಲಿ ಬೆಳೆ ಇರಲಿಲ್ಲ ಚೀಟಿಯ ಪ್ರಶ್ನೆ ಇಲ್ಲವೆನ್ನುತ್ತಾರೆ. ರಘುರವರು ನನ್ನನ್ನು ತೋಟಕ್ಕೆ ಕರೆದುಕೊಂಡು ಹೋಗಿರಲಿಲ್ಲ.

ಚಾಸಾ *1* ಈ ಪ್ರಕರಣದಲ್ಲಿ ಏನೆಂದು ದೂರು ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಸಹಿ ಹೊಂದಾಣಿಕೆ ಆಗದ ಬಗ್ಗೆ ಯಾರೂ ಹೇಳಿಲ್ಲ. ಪೊಲೀಸರು ಆಗಾಗ ನನ್ನನ್ನು ಠಾಣೆಗೆ ಕರೆಸುತ್ತಾರೆಂದರೆ ಸರಿಯಲ್ಲ. ನಾನು *2*ನೇ ಮಹಜರಿಗೆ ಸಹಿ ಮಾಡಿದ್ದೇನೆ. ಚಾಸಾ *4* ರವರು ನನಗೆ ಪರಿಚಯವಿದ್ದಾರೆ. ಅವರು ಪೊಲೀಸ್ ಠಾಣೆಯಲ್ಲಿ ಭಾವಚಿತ್ರ ತೆಗೆಯಲು ಹೋಗುತ್ತಾರೆಂದರೆ ಸರಿಯಲ್ಲ. ನಾನು ಚಾಸಾ *1* ರವರ ತಂದೆ ಬಳಿ ಸಾಲ ಮಾಡಿದ್ದೇನೆಂದರೆ ಸರಿಯಲ್ಲ. ಆ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತೇನೆಂದರೆ ಸರಿಯಲ್ಲ. ನನಗೆ ಯಾವುದೇ ವ್ಯವಹಾರದ ಬಗ್ಗೆ ಜ್ಞಾನ ಇಲ್ಲವೆಂದರೆ ಸರಿಯಲ್ಲ. ರಘುರವರೇ ಚೆಕ್ಕಿಗೆ ಹಾಗೂ ಚೇಣಿ ಚೀಟಿಗೆ ಸಹಿ ಮಾಡಿದ್ದಾರೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ:**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)*

ಓ ಹೇ ಕೇ ಸ ಇ ಎ ಒ

ಸಹಿ/-

(ಎಂ.ಸಿ. ನಂಜೇಗೌಡ)

ಪ್ರಪ್ರದನ್ಯಾದಂ: ತರೀಕೆರೆ.